# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 04.08.2010

## *ರಸ್ತೆ ನಾಮಕರಣ : ಸಾರ್ವಜನಿಕ ಆಕ್ಷೇಪಣೆಗೆ ಆಹ್ವಾನ*

ದಿನಾಂಕ: 29.05.2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 44/2010-11 ರಲ್ಲಿ ಈ ಕೆಳಕಂಡ ರಸ್ತೆಗಳಿಗೆ ನಾಮಕರಣ ಮಾಡುವುದೆಂದು ತೀರ್ಮಾನಿಸಲಾಗಿದೆ.

1) ಮಹಾಲಕ್ಷ್ಮೀ ಬಡಾವಣೆ ಎಂಟ್ರೆನ್ಸ್ ವೃತ್ತಕ್ಕೆ ***"ಇಸ್ಕಾನ್ ಟೆಂಪಲ್ ವೃತ್ತ"*** ಎಂದು ನಾಮಕರಣ ಮಾಡುವುದು.
2) ಜಯನಗರ 5ನೇ ಬಡಾವಣೆಯ 5ನೇ ಮುಖ್ಯರಸ್ತೆಯಿಂದ 11ನೇ ಮುಖ್ಯರಸ್ತೆಯವರೆಗಿನ 36ನೇ ಅಡ್ಡರಸ್ತೆಗೆ ***"ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ರಸ್ತೆ"*** ಎಂದು ನಾಮಕರಣ ಮಾಡುವುದು.
3) ಜಯನಗರ 5ನೇ ಮುಖ್ಯರಸ್ತೆಯಿಂದ 11ನೇ ಮುಖ್ಯರಸ್ತೆವರೆಗಿನ 46ನೇ ಅಡ್ಡರಸ್ತೆಗೆ ***"ದಾಸವರೇಣ್ಯ ಕನಕದಾಸ ರಸ್ತೆ"*** ಎಂದು ನಾಮಕರಣ ಮಾಡುವುದು.
4) ಜಯನಗರ 5ನೇ ಬಡಾವಣೆಯ 9ನೇ ಮುಖ್ಯರಸ್ತೆಯಿಂದ 46ನೇ ಅಡ್ಡರಸ್ತೆಯವರೆಗಿನ 40ನೇ ಅಡ್ಡರಸ್ತೆಗೆ ***"ಸ್ವಾಮಿ ವಿವೇಕಾನಂದ ಮಾರ್ಗ"*** ಎಂದು ನಾಮಕರಣ ಮಾಡುವುದು.
5) ಜೆ.ಪಿ. ನಗರದ (ಆರ್.ವಿ. ದಂತ ಮಹಾ ವಿದ್ಯಾಲಯವಿರುವ) ಮೊದಲನೆ ಹಂತದ 24ನೇ ಮುಖ್ಯರಸ್ತೆಯ 5ನೇ ಅಡ್ಡರಸ್ತೆಗೆ ***"ಶ್ರೀ ಡಿ.ಎ. ಪಾಂಡು ರಸ್ತೆ"*** ಎಂದು ನಾಮಕರಣ ಮಾಡುವುದು.
6) ಜಯನಗರ 4ನೇ ಬ್ಲಾಕ್‌ನ 32ನೇ ಅಡ್ಡರಸ್ತೆಯಿಂದ 39ನೇ ಅಡ್ಡರಸ್ತೆಯವರೆಗಿನ 16ನೇ ಮುಖ್ಯರಸ್ತೆಗೆ ***"ಶ್ರೀ ಬಿ.ಎಲ್. ಲಕ್ಕೇಗೌಡ ರಸ್ತೆ"*** ಎಂದು ನಾಮಕರಣ ಮಾಡುವುದು.

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**